# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ | 1346 |
| 2 | ಸದಸ್ಯರ ಹೆಸರು | ಶ್ರೀ. ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| 3 | ಉತ್ತರಿಸಬೇಕಾದ ಸಚಿವರು | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| 4 | ಉತ್ತರಿಸಬೇಕಾದ ದಿನಾಂಕ | 30-12-2022 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರದಲ್ಲಿರುವ ಪ್ರತಿಷ್ಠಿತ ಲಾಲ್ ಬಾಗ್ ಸಸ್ಯಕಾಶಿ ಉದ್ಯಾನವನಕ್ಕೆ ಪ್ರತಿದಿವಸ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಹಾಗೂ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಉದ್ಯಾನವನ ಕಸದರಾಶಿಯು ವವವಾಗಿ ಮಾರ್ಪಟ್ಟು ಪ್ರತಿಷ್ಠಿತ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದು ಗಮನಕ್ಕೆ ಬಂದಿದೆ.<br>News paper reports has come to the notice. |
| ಆ | ಪ್ರತಿಷ್ಠಿತ ಈ ರಾಷ್ಟ್ರೀಯ ಉದ್ಯಾನವನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೆ ಉದ್ಯಾನ ನಗರವೆಂದು ಹೆಸರುವಾಸಿಯಾಗಿರುವ ಬೆಂಗಳೂರಿಗೆ ಈ ಉದ್ಯಾನವನವನ್ನು ಸರಿಯಾಗಿ ನಿರ್ವಹಣೆ ಮಾಡದೆ ಇರುವುದು ಬೆಂಗಳೂರಿಗೆ ಕೆಟ್ಟ ಹೆಸರು ಬಂದಂತಾಗುವುದಲ್ಲವೇ; | ಲಾಲ್ ಬಾಗ್ ಉದ್ಯಾನವನ 240 ಎಕರೆಯಲ್ಲಿ ಹರಡಿರುವ ಬೃಹತ್ ಸಸ್ಯಕಾಶಿ, ದಿನವಹಿ ಮುಂಜಾನೆ 10,000ಕ್ಕೂ ಹೆಚ್ಚು ಸಂಖ್ಯೆಯ ಮತ್ತು ಸಂಜೆ 3,000 ಕ್ಕೂ ಹೆಚ್ಚು ಸಂಖ್ಯೆಯ ವಾಯುವಿಹಾರಿಗಳೂ ಹಾಗೂ ಸರಾಸರಿ 3-4 ಸಾವಿರ ಪ್ರವಾಸಿಗರು, ರಜಾ ದಿವಸಗಳಲ್ಲಿ ಈ ಸಂಖ್ಯೆ 12-13 ಸಾವಿರದ ಗಡಿದಾಟುತ್ತದೆ. ಫಲಪುಷ್ಪ ಪ್ರದರ್ಶನದ ಅವಧಿಯಲ್ಲಿ ಈ ಸಂಖ್ಯೆ ಲಕ್ಷದ ಗಡಿ ದಾಟುತ್ತದೆ. ಇಷ್ಟು ಜನರನ್ನು ಸೆಳೆಯುವ ಲಾಲ್ ಬಾಗ್ ನಲ್ಲಿ ಸ್ವಚ್ಛತೆ / ನೈರ್ಮಲ್ಯತೆಯನ್ನು ಕಾಪಾಡಲು ತೋಟಗಾರಿಕೆ ಇಲಾಖೆಯು ಕೈಗೊಂಡಿರುವ ಕ್ರಮಗಳು ಇಂತಿವೆ.<br>1. ಮೊದಲಿನಿಂದಲೂ ಇಲಾಖೆಯು ಆಯ್ದ ಮಾಲಿಗಳಿಂದಲೇ ಸಣ್ಣ ಪ್ರಮಾಣದ ಸ್ವಚ್ಛತಾ ಕಾರ್ಯಗಳನ್ನು ಮಾತ್ರ ಕೈಗೊಳ್ಳಲಾಗುತ್ತಿತ್ತು. 1999-2000ರ ಅವಧಿಯಿಂದ ಹೊರಗುತ್ತಿಗೆ ಆಧಾರದ ಮೇಲೆ 8-10 ಜನ ಸ್ವಚ್ಛತಾ ಸಿಬ್ಬಂದಿ ಸೇವೆ ಪಡೆದು ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಪ್ರಾರಂಭಿಸಲಾಯಿತು. 2008-09 ರ ಅವಧಿಯಿಂದ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು 20-25ಕ್ಕೆ ಹೆಚ್ಚಿಸಲಾಯಿತು. 2017-18 ರ ಅವಧಿಯ ನಂತರ 50 ಜನ ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗುತ್ತಿದೆ.<br>2. ಹಿಂದೆ ಲಾಲ್ ಬಾಗ್ ನಲ್ಲಿ ಕೇವಲ 45 ಸಂಖ್ಯೆಯ ಡಸ್ಟ್ ಬಿನ್ಸ್ ಗಳಿದ್ದು, ಇಂದು 315 ಕ್ಕೂ ಹೆಚ್ಚು ಡಸ್ಟ ಬಿನ್ಸ್ ಗಳನ್ನು ಸಸ್ಯತೋಟದ ಆಯ್ದ ಭಾಗಗಳಲ್ಲಿ ಅಳವಡಿಸಲಾಗಿದೆ. ಕೆಲವು ಕಡೆ wet and dry ಡಸ್ಟ ಬಿನ್ಸ್ ಗಳನ್ನು ಸಹಾ ಅಳವಡಿಸಲಾಗಿದೆ.<br>3. ಇಂದು ಪರಿಣಾಮಕಾರಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ಅನುವಾಗುವಂತೆ ಖಾಸಗೀ ಸಂಸ್ಥೆಗಳ ಪರಿಣಿತರು ಮತ್ತು ಸ್ವಚ್ಛತಾ ಕಾರ್ಯದಲ್ಲಿ ಪರಿಣಿತರು ಹಾಗೂ ಹಲವು ಸಂಘ ಸಂಸ್ಥೆಗಳ ಪರಿಣಿತರನ್ನೊಳಗೊಂಡ ಸಭೆಗಳು ಮತ್ತು |

| | | |
|---|---|---|
| | | ಪ್ರಾತ್ಯಕ್ಷತೆಗಳನ್ನು ಕೈಗೊಂಡು ಅವರ ಸಲಹೆಗಳನ್ನಾಧರಿಸಿ 'ಸ್ವಚ್ಛತಾ ಕಾರ್ಯಕ್ಕೆ ಅನುವಾಗುವಂತಹ ಎಲ್ಲಾ ಪರಿಣಾಮಕಾರಿ ಕ್ರಮಗಳನ್ನು ಅನುಸರಿಸಲಾಗುತ್ತಿದೆ.<br>4. ಖಾಸಗಿ ಸಂಸ್ಥೆ ವತಿಯಿಂದ 2020 ರಲ್ಲಿ CSR ಅನುದಾನದಡಿ 175 ಡಸ್ಟ್ ಬಿನ್ಸ್ ಗಳನ್ನು ಹೊಸದಾಗಿ ಒದಗಿಸಿದೆ. ಹಾಗೆಯೇ 4 ಜನ ಪರಿಣಿತ ಸ್ವಚ್ಛತಾ ಸಲಹೆಗಾರರ ಸೇವೆಯನ್ನು ಸಹಾ ಸತತವಾಗಿ 3 ವರ್ಷಗಳ ಕಾಲ ಒದಗಿಸುವ ಮುಖೇನ ಲಾಲ್ ಬಾಗ್ ನ ಸ್ವಚ್ಛತಾ ಸಿಬ್ಬಂದಿಗಳಿಗೆ ದೀರ್ಘಕಾಲದ ಪ್ರಾಯೋಗಿಕ ತರಭೇತಿಯನ್ನು ನೀಡಿ ಸಹಕರಿಸಿದ್ದಾರೆ.<br>5. ಲಾಲ್ ಬಾಗ್ ಅನ್ನು ಮೂಲತಃ 9 ವಿಭಾಗಗಳಾಗಿ ವಿಂಗಡಿಸಿದ್ದು, ಆಯಾ ವಿಭಾಗದ ಉಸ್ತುವಾರಿ ಅಧಿಕಾರಿ/ಸಿಬ್ಬಂದಿಗಳು ಪರಿಣಾಮಕಾರಿ ಸ್ವಚ್ಛತೆಗಾಗಿ ಆದ್ಯತೆ ನೀಡುತ್ತಿದ್ದಾರೆ. ಇವೆಲ್ಲವುಗಳಿಗೆ ಉಸ್ತುವಾರಿಯಾಗಿ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು ಲಾಲ್ ಬಾಗ್ ಸಸ್ಯತೋಟ ರವರು ಕಾರ್ಯನಿರ್ವಹಿಸುತ್ತಿದ್ದಾರೆ.<br>6. ದಿನವಹಿ ಒಂದು ಸ್ವಚ್ಛತಾ ತಂಡ ರಸ್ತೆಗಳು ಹಾಗೂ ಪ್ರಮುಖ ಸ್ಥಳಗಳನ್ನು ಸ್ವಚ್ಛಗೊಳಿಸಿದರೆ, ಮತ್ತೆರಡು ತಂಡಗಳು ಸಸ್ಯತೋಟವನ್ನು ವಿವಿಧ ಭಾಗಗಳಿಗೆ ವಿಭಾಗಿಸಿಕೊಂಡು ಅಲ್ಲಿ 'ಕತ್ತರಿಸಿದ ಹುಲ್ಲು, ಒಣ ಎಲೆಗಳು ಮತ್ತು ರೆಂಬೆ-ಕೊಂಬೆಗಳ ತೆರವು ಮತ್ತು ಸ್ವಚ್ಛತೆಯನ್ನು ಕೈಗೊಳ್ಳುತ್ತಿದ್ದಾರೆ. ನಾಲ್ಕನೇ ತಂಡವು ಡಸ್ಟ್ ಬಿನ್ಸ್ ಗಳಲ್ಲಿನ ಕಸದ ಸಂಗ್ರಹ ಮತ್ತು ವಿಲೇವಾರಿ ಕಾರ್ಯವನ್ನು ಕೈಗೊಳ್ಳುತ್ತಿದ್ದಾರೆ. ಇದಕ್ಕಾಗಿ ಒಂದು ಟ್ರ್ಯಾಕ್ಟರ್, 2 ಟಿಪ್ಪರ್ಸ್ ಗಳು, 1 ಕಾಂಪ್ಯಾಕ್ಟರ್ ಮತ್ತು ಇಬ್ಬರು ಮೇಲ್ವಿಚಾರಕರಿದ್ದಾರೆ.<br>7. ಸಸ್ಯತೋಟದಲ್ಲಿ ಸಂಗ್ರಹಗೊಳ್ಳುವ ಸಾವಯವ ತ್ಯಾಜ್ಯವನ್ನು (ಎಲೆ, ಕತ್ತರಿಸಿದ ಹುಲ್ಲು, ಸಣ್ಣ ರೆಂಬೆಗಳು ಇತ್ಯಾದಿ) ಲಾಲ್ ಬಾಗ್ ನ ಜಿಂಕೆ ನರ್ಸರಿ ಮತ್ತು ಬಂಡೆ ಹಿಂಭಾಗದ ಪ್ರದೇಶದಲ್ಲಿ ಕಾಂಪೋಸ್ಟ್ ತಯಾರಿಕೆಗೆ ಬಳಸಲಾಗುತ್ತಿದೆ. ಹೆಚ್ಚುವರಿಯಾದ ಸಾವಯವ ತ್ಯಾಜ್ಯವನ್ನು ಇಲಾಖೆಯ ಒಡೆತನದಲ್ಲಿರುವ ಹುಳಿಮಾವು ಜೈವಿಕ ಕೇಂದ್ರಕ್ಕೆ ಸಾಗಿಸಿ, ಕಾಂಪೋಸ್ಟ್ ಮತ್ತು ವರ್ಮಿಕಾಂಪೋಸ್ಟ್ ತಯಾರಿಕೆಗೆ ಬಳಸಲಾಗುತ್ತಿದೆ. ಲಾಲ್ ಬಾಗ್ ನಲ್ಲಿ ವಾರ್ಷಿಕ 25 ಟನ್ ಗಳಷ್ಟು ಕಾಂಪೋಸ್ಟ್ ಅನ್ನು ಉತ್ಪಾದಿಸಿ ಬಳಸಲಾಗುತ್ತಿದೆ.<br>8. ಲಾಲ್ ಬಾಗ್ ನಲ್ಲಿ ಸಂಗ್ರಹಿಸಲ್ಪಡುವ ಇತರೇ ತ್ಯಾಜ್ಯವನ್ನು ಗುತ್ತಿಗೆದಾರರು ದಿನವಹಿ ಕಾಂಪ್ಯಾಕ್ಟರ್ ಮುಖೇನ ಲಾಲ್ ಬಾಗ್ ನಿಂದ ಹೊರಸಾಗಿಸುತ್ತಾರೆ.<br>9. ಪ್ರವಾಸಿಗರು / ವಾಯುವಿಹಾರಿಗಳು ಸಸ್ಯತೋಟದ ಒಳಗಡೆಗೆ ಪ್ಲಾಸ್ಟಿಕ್ ಬಾಟಲ್ / ಇತರೇ ಪ್ಲಾಸ್ಟಿಕ್ ವಸ್ತುಗಳು ಮತ್ತು ತಿಂಡಿ-ತಿನಿಸುಗಳ ಪೊಟ್ಟಣಗಳನ್ನು ತರದಂತೆ ನಿಯಂತ್ರಿಸಲು ಲಾಲ್ ಬಾಗ್ ನ ಎಲ್ಲಾ 4 ದ್ವಾರಗಳಲ್ಲಿಯೂ ಒಬ್ಬರು ಮಹಿಳಾ Home guard ಗಳನ್ನು 2020ನೇ ಸಾಲಿನಿಂದ ನೇಮಕ ಮಾಡಲಾಗಿದ್ದು, ಪ್ರತಿಯೊಬ್ಬರನ್ನು ತಪಾಸಣೆಗೊಳಿಸಿ ಒಳಬಿಡುತ್ತಾರೆ. ಪ್ಲಾಸ್ಟಿಕ್ ವಸ್ತು / ಬಾಟಲ್ ಗಳನ್ನು ಅಲ್ಲಿಯೇ ಸಂಗ್ರಹಿಸಲಾಗುತ್ತದೆ.<br>10. ಹಿಂದೆ ಲಾಲ್ ಬಾಗ್ ನಿರ್ವಹಣೆಗೆ ಒಟ್ಟು 136ಕ್ಕೂ ಹೆಚ್ಚು |

ಇಲಾಖಾ ತೋಟಗಾರರ ಸಂಖ್ಯೆ ಮಂಜೂರಾಗಿದ್ದು, ಪ್ರಸ್ತುತ ಈ ಸಂಖ್ಯೆಯು 29ಕ್ಕೆ ಇಳಿದಿದೆ. ಒಟ್ಟಾರೆ 107 ತೋಟಗಾರರ ಹುದ್ದೆಗಳು ಖಾಲಿ ಇರುತ್ತವೆ. ಇದು ಲಾಲ್ ಬಾಗ್ ನ ಇನ್ನೂ ಉತ್ತಮ ನಿರ್ವಹಣೆಗೆ ಧಕ್ಕೆಯಾಗಿದೆ.

Lalbagh Garden is a mega botanical garden spread over 240 acres. Daily more than 10,000 in the morning and 3,000 walkers in the evening and 3-4 thousand tourist visit the park. This will be more than 12-13 thousand during holidays  the following measures have been taken by horticulture department maintain cleanliness and hygiene of the attractive Lalbagh.

1. Since beginning cleaning works of petty nature were taken up by the department from selected malies. 1999-2000 onwards cleaning work was commenced by engaging 8-10 cleaning staff on outsource basis the number of cleaning staff was increase to 20-25 from 2008-09. After 2017-18 service of 50 cleaning staff is being obtained.
2. Earlier only 45 dustbins work in Lalbagh. Today more than 315 dustbins are kept in selected places of the garden. In same areas wet and dry dustbins are also kept.
3. These days in order to take up effective cleaning work meetings and demonstrations are held with private sector experts and hygiene exerts as well as institutions and agencies. Based on their suggestion effective measures for clean work are adopted.
4. During 2020, 175 new dustbins are supplied by private institutions under CSR. Further, long duration practical training imparted to the cleaning staff of Lalbagh continuously by engaging the service of 4 hygiene experts for 3 years.
5. Lalbagh is made into 9 divisions and the respective supervising officer /staff are taking up cleaning on priority effectively. Overall supervision is taken up by Assistant Director of Horticulture and Deputy Director of Horticulture, Lalbagh garden.
6. Daily one team cleans up roads and prime places while other two teams take up cleaning works in other areas of the garden by grass cutting, disposal of dry leaves and twigs & stems. Fourth team is disposing the dustbin trash. For this purpose one tractor, two tippers, one Compactor and two supervisors are engaged.
7. The organic waste (leaf , cut grass, twigs etc) collected in the garden are utilized for compost making behind deer nursery and rock in the garden. Excess organic waste is transported to biocentre under control of the department for

| | | |
|---|---|---|
| | | making compost and vermicompost. Annually 25 tons of compost is made and utilized.<br>8. The other waste collected in Lalbagh is taken out of Lalbagh by the contractor on daily bases through compactor.<br>9. In order to prevent the entry of plastic bottle/ other plastic items and food covers into the Lalbagh by visitors /walkers one lady home guard is appointed each at four gates who inspect everyone before entry. Plastic items/bottles are removed there itself.<br>10. Earlier 136 gardeners were sanctioned for Lalbagh maintenance, now it is reduced 29. A total 107 gardeners post are vacant. This has effected better maintenance of Lalbagh. |
| ಇ | ಉದ್ಯಾನವನದ ನಿರ್ವಹಣೆಗೆ ಸರ್ಕಾರ 2022 ರಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; ನಿರ್ವಹಣೆಗೆ ಆಗಿರುವ ವೆಚ್ಚವೆಷ್ಟು; | ಉದ್ಯಾನವನದ ನಿರ್ವಹಣೆಗೆ 2022ನೇ ಸಾಲಿನಲ್ಲಿ ರೂ.2.50 ಕೋಟಿಗಳನ್ನು ಬಿಡುಗಡೆ ಮಾಡಿದೆ.<br>ನಿರ್ವಹಣೆಗೆ ಆಗಿರುವ ವೆಚ್ಚ – ರೂ.2.44 ಕೋಟಿಗಳು.<br>Rs.2.50crore was released for maintenance of the garden during 2022.<br>Rs. 2.44crore is utilized for maintenance. |
| ಈ | ಉದ್ಯಾನವನಕ್ಕೆ ಏಪ್ರಿಲ್ 2022 ರಿಂದ ಈ ವರೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಭೇಟಿಯಿಂದ ಪ್ರತಿ ತಿಂಗಳು ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; | ಏಪ್ರಿಲ್ - 2022 ರಿಂದ ದಿನಾಂಕ:18-12-2022 ರವರಗೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಭೇಟಿಯಿಂದ ಸರ್ಕಾರಕ್ಕೆ ಬಂದಿರುವ ಒಟ್ಟಾರೆ ಆದಾಯ ರೂ.2.34 ಕೋಟಿಗಳಾಗಿರುತ್ತದೆ.<br>A total income of 2.34crore has been received during April -2022 to dated 18-12-2022 by the tourist and public visit. |
| ಉ | ಉದ್ಯಾನವನದ ನಿರ್ವಹಣೆ ಮಾಡುತ್ತಿರುವ ಖಾಯಂ / ಹೊರಗುತ್ತಿಗೆ ಸಿಬ್ಬಂಧಿಗಳ ಸಂಖ್ಯೆ ಎಷ್ಟು; | ಉದ್ಯಾನವನ ನಿರ್ವಹಣೆ ಮಾಡುತ್ತಿರುವ ಖಾಯಂ ತೋಟಗಾರರ ಸಂಖ್ಯೆ: 29 ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆ: 50.<br>Total number of permanent gardeners for maintaining garden is 29 and the number of outsource is 50 |

No. HORTI 626 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು